**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 06.04.2026:**

ಮುಂದುವರೆದ ಪಾಟೀ ಸವಾಲುಃ ಎದುರುದಾರರ ಪರ ವಕೀಲರಿಂದಃ

1ನೇ ಪ್ರತಿವಾದಿಯು ಸಾಲದ ಖಾತೆಗೆ ಸುಮಾರು 13 ಲಕ್ಷ ರೂ ಹಣವನ್ನು ಪಾವತಿಸಿರುತ್ತಾರೆ. ಅದನ್ನು ನನ್ನ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ಈ ದಾವೆ ಹಾಕುವ ಸಮಯದಲ್ಲಿ ಪ್ರತಿವಾದಿಯಿಂದ 15 ಲಕ್ಷ ರೂ ಬಾಕಿ ಇತ್ತು. ಅವರಿಗೆ 8,70,000/- ಸಬ್ಸಿಡಿ ಹಣ ಮಂಜೂರಾಗಿತ್ತು. ಅದನ್ನು ನನ್ನ ವಾದ ಪತ್ರದಲ್ಲಾಗಲಿ ನನ್ನ ಮುಖ್ಯ ವಿಚಾರಣೆಯಲ್ಲಾಗಲಿ ಹೇಳಿದ್ದೇನ ಎಂದರೆ ಸಾಲದ ಖಾತೆಯಲ್ಲಿ ಕಂಡುಬರುತ್ತಿದೆ ಎನ್ನುತ್ತಾರೆ. ಸಬ್ಸಿಡಿ ಹಣಕ್ಕೆ ಬಡ್ಡಿ ವಿದಿಸುವುದಿಲ್ಲ. 20 ಲಕ್ಷ ರೂಪಾಯಿಗೆ ಮಾತ್ರ ನಾವು ಬಡ್ಡಿ ವಿಧಿಸುತ್ತೇವೆ. ಪ್ರತಿವಾದಿಯು ಸಾಲದ ಹಣವನ್ನು ಪೂರ್ತಿಯಾಗಿ ಪಾವತಿಸಿದ್ದಾರೆ

ಎಂದರೆ ಸರಿಯಲ್ಲ. ಹೆಚ್ಚಿನ ಬಡ್ಡಿಯನ್ನು ವಿಧಿಸಿ, ಅವರು ಸಾಲದ ಹಣವನ್ನು ಪಾವತಿಸಲು ಬಾಕಿ ಇದ್ದಾರೆ ಎಂದು ತೋರಿಸಿದ್ದೇವೆ ಎಂದರೆ ಸರಿಯಲ್ಲ.  ಸಬ್ಸಿಡಿ ಹಣ ಮಿರರ್ ಅಕೌಂಟ್ ಎನ್ನುವುದನ್ನು ಈ ಹಿಂದೆ ಹೇಳಿಲ್ಲ. ಇದೇ ಮೊದಲ ಬಾರಿಗೆ ಹೇಳುತ್ತಿದ್ದೀರ ಎಂ ದರೆ ಸರಿಯಲ್ಲ. ತಾವು ಇಲ್ಲಿ ಕೇಳಿದಂತಹ ಹಣವನ್ನು ಪ್ರತಿವಾದಿ ಕಟ್ಟಲು ಬದ್ದರಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**